ಕರ್ನಾಟಕ ಸರ್ಕಾರ
(ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ/05/ಇಎಪಿ/2022

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001,
ದಿನಾಂಕ:17.03.2023.

**ಇವರಿಗೆ,**

ಎಲ್ಲಾ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.

**ಮಾನ್ಯರೆ,**

**ವಿಷಯ:** ಜನವರಿ/ಫೆಬ್ರವರಿ 2023ರ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ಬಗ್ಗೆ.

***

2023ರ ಜನವರಿ/ಫೆಬ್ರವರಿ ತಿಂಗಳಲ್ಲಿ ನಡೆಸಲಾದ ಸೆಮಿಸ್ಟರ್ ಪದ್ಧತಿಯ ವಿವಿಧ ಡಿಪ್ಲೋಮಾ ಪರೀಕ್ಷೆಯ ಫಲಿತಾಂಶಗಳನ್ನು **ದಿನಾಂಕ:17-03-2023ರ ಶುಕ್ರವಾರ** ಅಪರಾಹ್ನ 03:00 ಗಂಟೆಗೆ ಪ್ರಕಟಿಸಲಾಗುವುದು. BTELinx ವೆಬ್‌ಪೋರ್ಟಲ್ ಮೂಲಕ ಕಾರ್ಯದರ್ಶಿಯವರ ಮುದ್ರಿತ ಸಹಿ ಇರುವ ತಮ್ಮ ಸಂಸ್ಥೆಯ ಫಲಿತಾಂಶವನ್ನು ಪಡೆದು ಒಂದು ಪ್ರತಿಯನ್ನು ಮೇಲೆ ತಿಳಿಸಿದ ದಿನಾಂಕದಂದು ಅಪರಾಹ್ನ **03:00** ಗಂಟೆಗೆ ನಿಮ್ಮ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಬೇಕೆಂದು ಸೂಚಿಸಲಾಗಿದೆ.

ಜನವರಿ/ಫೆಬ್ರವರಿ 2023ರ ಪರೀಕ್ಷೆಯ ಮರು ಮೌಲ್ಯ ಮಾಪನ/ ಫೋಟೋ ಪ್ರತಿಗೆ ಅರ್ಜಿ ಸಲ್ಲಿಸುವ ಬಗ್ಗೆ ಸುತ್ತೋಲೆಯನ್ನು ಪ್ರಕಟಿಸಲಾಗಿದೆ.

ಅಂಕಪಟ್ಟಿಗಳನ್ನು ಸದ್ಯದಲ್ಲಿಯೆ ಕಳುಹಿಸಿ ಕೊಡಲಾಗುವುದು. ಇದಲ್ಲದೆ ಪ್ರವೇಶ ಅನುಮೋದನೆ ಪಡೆಯದ ಹಾಗೂ ಇತರೆ ಕಾರಣಗಳಿಗಾಗಿ ಅನರ್ಹರಾದ ಅಭ್ಯರ್ಥಿಗಳ ಅಂಕಪಟ್ಟಿಗಳನ್ನು ತಡೆಹಿಡಿಯಲಾಗುವುದೆಂದು ತಿಳಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ಸಂಸ್ಥೆಯವರು ಮಂಡಳಿಯ ಪತ್ರಕ್ಕಾಗಿ ಕಾಯದೇ ಅಗತ್ಯವಾದ ದಾಖಲೆಗಳನ್ನು ಕೂಡಲೇ ಕಳುಹಿಸಿದ ನಂತರವೇ ಫಲಿತಾಂಶ ಪ್ರಕಟಿಸಿ ಅಂಕಪಟ್ಟಿಗಳನ್ನು ಕಳುಹಿಸಲಾಗುವುದೆಂತಲೂ ತಿಳಿಸಲಾಗಿದೆ. ಪ್ರವೇಶಾನುಮೋದನೆಯಾಗದ / ಇತರೆ ಕಾರಣಗಳಿಗಾಗಿ ಅನರ್ಹರಾದವರ ಫಲಿತಾಂಶ ಪ್ರಕಟವಾಗಿದ್ದಲ್ಲಿ ಅಂಥ ಪ್ರಕರಣಗಳ ಬಗ್ಗೆ ಪ್ರಿನ್ಸಿಪಾಲರು ಕೂಡಲೇ ಪ್ರತ್ಯೇಕವಾಗಿ ಮಂಡಳಿಯ ಗಮನಕ್ಕೆ ತರಲು ಸೂಚಿಸಲಾಗಿದೆ.

ಸೆಮಿಸ್ಟರ್ ಪದ್ಧತಿಯ ಅಭ್ಯರ್ಥಿಗಳ ತಡೆ ಹಿಡಿಯಲಾದ ಫಲಿತಾಂಶವನ್ನು ಅಭ್ಯರ್ಥಿಗಳ ನೋಂದಣಿ ಸಂಖ್ಯೆಯುಳ್ಳ ಅರ್ಜಿ, ಹಾಜರಾದ ಬಗ್ಗೆ ಮಾಹಿತಿ, ಹಿಂದೆ ಪರೀಕ್ಷೆಗೆ ಹಾಜರಾದ ಅಂಕಪಟ್ಟಿಯ ಜೆರಾಕ್ಸ್ ಪ್ರತಿ ಹಾಗೂ ಪರೀಕ್ಷಾ ಶುಲ್ಕ ಕಟ್ಟಿದ ರಶೀದಿಯೊಂದಿಗೆ ಫಲಿತಾಂಶ ಪ್ರಕಟವಾದ ಹದಿನೈದು ದಿನಗಳೊಳಗಾಗಿ ಪೂರ್ಣ ಮಾಹಿತಿಯನ್ನು ಸಲ್ಲಿಸಿ ತಪ್ಪದೇ ಫಲಿತಾಂಶ ಪಡೆಯುವಂತೆ ತಿಳಿಸಲಾಗಿದೆ. ತಪ್ಪಿದಲ್ಲಿ ಆ ಸಂಸ್ಥೆಯ ಪ್ರಿನ್ಸಿಪಾಲರೇ ಜವಾಬ್ದಾರರಾಗಿರುತ್ತಾರೆ.

**ವಿಶೇಷ ಸೂಚನೆ:-**

ಜನವರಿ/ಫೆಬ್ರವರಿ 2023ರ ಸೆಮಿಸ್ಟರ್ ಪರೀಕ್ಷೆಗಳ ಥಿಯರಿ ಉತ್ತರ ಪತ್ರಿಕೆಗಳ ಫೋಟೋ ಪ್ರತಿ / ಮರು ಮೌಲ್ಯಮಾಪನಕ್ಕೆ ತಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳ ವಿವರಗಳನ್ನು ಈಗಾಗಲೇ ತಾವು ಉಪಯೋಗಿಸುತ್ತಿರುವ BTE Linx ವೆಬ್‌ಪೋರ್ಟಲ್ ಮೂಲಕ onlineನಲ್ಲಿ ತುಂಬಿಸಬೇಕಾಗಿರುತ್ತದೆ. ಪ್ರತಿ ಅರ್ಜಿಯ ವಿವರಗಳನ್ನು ಆನ್‌ಲೈನ್‌ನಲ್ಲಿ ತುಂಬಿಸಿದ ನಂತರ ಬರುವಂತಹ ಒಂದು Acknowledgement Slip

ಪ್ರಿಂಟ್ ತೆಗೆದು ಆಯಾ ಅರ್ಜಿಗಳಿಗೆ ಲಗತ್ತಿಸಿ ನಂತರ ಸದರಿ ಅರ್ಜಿಗಳನ್ನು ತಮ್ಮ ಮೇಲು ರುಜು ಮಾಡಿ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಗೆ ನಿಗಧಿತ ದಿನಾಂಕದೊಳಗೆ ರವಾನಿಸಲು ಎಲ್ಲಾ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ.

ಆನ್‌ಲೈನ್‌ನಲ್ಲಿ ಭರ್ತಿ ಮಾಡಿ Acknowledgement Slip ಲಗತ್ತಿಸದೇ ಇರುವ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲವೆಂದು ತಿಳಿಸಲಾಗಿದೆ.

ತಮ್ಮ ನಂಬುಗೆಯ,

17/3/23

**ಕಾರ್ಯದರ್ಶಿ,**
**ತಾಂತ್ರಿಕ ಪರೀಕ್ಷಾ ಮಂಡಳಿ,**
**ಬೆಂಗಳೂರು.**

17/3/23

**ಇವರಿಗೆ,**

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ –ಮುಂದಿನ ಸೂಕ್ತ ಕ್ರಮಕ್ಕಾಗಿ.

**ಪ್ರತಿ:–**

1. ಆಯುಕ್ತರ ಆಪ್ತಶಾಖೆ– ಅವಗಾಹನೆಗಾಗಿ.
2. ನಿರ್ದೇಶಕರ ಆಪ್ತಶಾಖೆ– ಅವಗಾಹನೆಗಾಗಿ.
3. ಸಹಾಯಕ ನಿರ್ದೇಶಕರು (ಎಸಿಎಂ) ತಾಂತ್ರಿಕ ಶಿಕ್ಷಣ ಇಲಾಖೆ–ಮಾಹಿತಿಗಾಗಿ.
4. ಇ–ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
5. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
6 ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ರಿಜಿಸ್ಟ್ರಾರ್ (ಪರೀಕ್ಷೆ)
8. ಕಾರ್ಯದರ್ಶಿಗಳ ಆಪ್ತಶಾಖೆ.
9. ಉಪ ನಿರ್ದೇಶಕರು (ಪರೀಕ್ಷೆ)
10. ಅಧೀಕ್ಷಕರು (ಆರ್.ಡಿ.ಎಂ.) (1) ರಿಂದ (15)
11. ಗಣಕ ಕೇಂದ್ರ–ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು.
12. ಕಚೇರಿ ಪ್ರತಿ.